# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.379-2014** **ಪಿ . ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ವೆಂಕಟೇಶ್<br>ಲೇ.ಸಿದ್ದನಾಯಕ<br>53 ವರ್ಷ<br>ಸರ್ಕಾರಿ ನೌಕರ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 03-02-2022.** |

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಬಿ.ಎಲ್.ಎಸ್ ರವರಿಂದಃ-**

ಪ್ರತಿವಾದಿ ಸ್ವತ್ತು ಸರ್ವೆ ನಂ.230/6 ಗೆ ಸಂಬಂಧಿಸಿದಂತೆ 2013-14 ರ ಆರ್.ಟಿ.ಸಿ(2 ಪುಟ)ಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಪ್ರತಿವಾದಿ ಸ್ವತ್ತು ಸರ್ವೆ ನಂ.230/4 ಗೆ ಸಂಬಂಧಿಸಿದಂತೆ 2010-11 ರ ಆರ್.ಟಿ.ಸಿ ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ದಿ.24-11-2013 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸ್‌ನ ಕಚೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, 3 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-6 ರಿಂದ 8 ಎಂದು, ದಿ.06-12-2013 ರಂದು ಪ್ರತಿವಾದಿಗಳು ನನಗೆ ಕಳುಹಿಸಿದ ಪ್ರತ್ಯೂತ್ತರದ ನೋಟಿಸ್ ನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯೂ ದಿ.01-04-2011 ರ ನೋಂದಣಿ ರಹಿತ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದರ ದಾಖಲೆಯಲ್ಲಿ ಸ್ವಾಧೀನವನ್ನೂ ಕೂಡ ಬಿಟ್ಟು ಕೊಟ್ಟಿರುವ ಒಕ್ಕಣೆ ಇದ್ದು ಅದು ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿ ಮಾಡದೇ ಇರುವುದರಿಂದ ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ಪ್ರತಿವಾದಿ ಪರ ವಕೀಲರು ತಕರಾರು

ಮಾಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯವು ಸರಿಯಾದ ಸ್ಟ್ಯಾಂಪ್ ಡ್ಯೂಟಿ ಅಂಡ್ ಪೆನಾಲಿಟಿಯನ್ನು ಲೆಕ್ಕ ಹಾಕಲು ಇಂಪೌಂಡ್ ಮಾಡಿರುತ್ತದೆ.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**